# ತಹಶೀಲ್ದಾರ್ ಸಂಡೂರು ಇವರ ನ್ಯಾಯಾಲಯ,

**ಉಪಸ್ಥಿತರು:–** ಶ್ರೀ.ಯು.ನಾಗರಾಜ, ತಹಶೀಲ್ದಾರರು, ಸಂಡೂರು.

**ವಾದಿಗಳು:–**1)ಶ್ರೀಮತಿ.ರತ್ನಮ್ಮ ಗಂಡ.ದೊಡ್ಡಬಸಪ್ಪ, ಕುರೇಕುಪ್ಪ ಗ್ರಾಮ, ಸಂಡೂರು ತಾಲ್ಲೂಕು.

2)ಶ್ರೀ.ಶೇಖರ ಚಕ್ರವರ್ತಿ ತಂದೆ.ಜಿತೇನ್ ಚಕ್ರವರ್ತಿ, ತೋರಣಗಲ್ಲು ಗ್ರಾಮ, ಸಂಡೂರು ತಾಲ್ಲೂಕು.

**ವಿರುದ್ಧ**

**ಪ್ರತಿವಾದಿಗಳು:–** ಕಂದಾಯ ನಿರೀಕ್ಷಕರು, ತೋರಣಗಲ್ಲು.

ಪೀಠಿಕೆ:–

| ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಸಂಡೂರು | ತೋರಣಗಲ್ಲು | ಕುರೇಕುಪ್ಪ | 258/B3 | 2.05 |

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಕುರೇಕುಪ್ಪ ಗ್ರಾಮ, ಸ.ನಂ. 258/B3 ವಿಸ್ತೀರ್ಣ 2.05 ಎಕರೆ ಜಮೀನು ಶ್ರೀಮತಿ.ರತ್ನಮ್ಮ ಗಂಡ.ದೊಡ್ಡಬಸಪ್ಪರವರ ಹೆಸರಿನಲ್ಲಿ ಖಾತೆ ಇದ್ದು, ಕಂದಾಯ ನಿರೀಕ್ಷಕರು ತೋರಣಗಲ್ಲು ಇವರು ಪ್ರಸ್ತಾಪಿತ ಸ.ನಂ. ಜಮೀನು ಬಗ್ಗೆ ವಿಚಾರಣೆ ನಡೆಸಿ ಹಾಲಿ ಖಾತೆದಾರರು ಶ್ರೀ.ಶೇಖರ ಚಕ್ರವರ್ತಿ ತಂದೆ.ಜಿತೇನ್ ಚಕ್ರವರ್ತಿ ಇವರಿಗೆ ವಿಸ್ತೀರ್ಣ 0.50 ಸೆಂಟ್ಸ್ ಜಮೀನು ಕ್ರಯನೊಂದಣೆ ಡಾ.ನಂ. 447/2006–07 ದಿನಾಂಕ:05–07–2006 ರಂತೆ ಕ್ರಯನೊಂದಣೆ ಮಾಡಿಸಿರುತ್ತಾರೆ. ಕ್ರಯನೊಂದಣೆ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರು ತೋರಣಗಲ್ಲು ಇವರು ಶಿಫಾರಸ್ಸು ಮಾಡಿದ್ದಾರೆ. ಈ ಪ್ರಕಾರ ಭೂಮಿ ಗಣಕೀಕರಣದಲ್ಲಿ ಹಕ್ಕುಬದಲಾವಣೆಗೆ ಸೂಕ್ತಕ್ರಮಕೈಗೊಳ್ಳಲು ಚೆಕ್‌ಲೀಸ್ಟ್ ಹಾಗೂ ನಮೂನೆ–21 ನೋಟೀಸು ತೆಗೆದು ಕಂದಾಯ ನಿರೀಕ್ಷಕರಿಗೆ ಕಳಿಸಲಾಗಿ ಕಂದಾಯ ನಿರೀಕ್ಷಕರು ನಮೂನೆ–21 ನೋಟೀಸ್ ಜಾರಿ ಮಾಡಲಾಗಿ ನಿಗಧಿತ ಅವಧಿಯೊಳಗೆ ಹಾಲಿ ಖಾತೆದಾರರಾದ ಶ್ರೀಮತಿ.ರತ್ನಮ್ಮ ಗಂಡ.ದೊಡ್ಡಬಸಪ್ಪ ಇವರು ನಮೂನೆ–21 ನೋಟೀಸಿಗೆ ಸಹಿ ಮಾಡಲು ನಿರಾಕರಿಸಿರುವುದರಿಂದ ಎಂ.ನಂ.35/15–16 ರಂತೆ ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಕಛೇರಿಗೆ ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣದ ಬಗ್ಗೆ ವಿಚಾರಣೆಯಿಂದ ಮುಂದಿನ ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನೋಟೀಸು ಜಾರಿಮಾಡಲಾಗಿ ದಿನಾಂಕ:04–07–2016 ರಿಂದ –09–2016 ರವರೆಗೆ ವಿಚಾರಣೆ ನಡೆಸಲಾಯಿತು. ವಾದಿ–1 ರವರು ಹಾಜರಾಗಿರುತ್ತಾರೆ. ಸಲ್ಲಿಸಿರುವ ದಾಖಲೆ ಪರಿಶೀಲಿಸಲಾಗಿ ಹಾಗೂ ಪ್ರಸ್ತಾಪಿತ ಸ.ನಂ.ಜಮೀನಿನ ಹಾಲಿ ಖಾತೆದಾರರಾದ ಶ್ರೀಮತಿ.ರತ್ನಮ್ಮ ಗಂಡ.ದೊಡ್ಡಬಸಪ್ಪ ಇವರು ದಿನಾಂಕ: 22–08–2016 ರಂದು ನ್ಯಾಯಾಲಯಕ್ಕೆ ಹಾಜರಾಗಿ ಕುರೇಕುಪ್ಪ ಗ್ರಾಮ, ಸ.ನಂ. 258/B3 ವಿಸ್ತೀರ್ಣ 2.05 ಎಕರೆ ಜಮೀನಿನ ಪೈಕಿ 00.50 ಸೆಂಟ್ಸ್ ಶ್ರೀ.ಶೇಖರ ಚಕ್ರವರ್ತಿ ತಂದೆ.ಜಿತೇನ್ ಚಕ್ರವರ್ತಿ ಇವರಿಗೆ ಡಾ.ನಂ. 447/2006–07 ರಂತೆ ಕ್ರಯನೊಂದಣೆ ಮಾಡಿಸಿರುತ್ತೇನೆ. ಈ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಕಾರಣ ಕ್ರಯನೊಂದಣೆ ಪ್ರಕಾರ ಹಕ್ಕುಬದಲಾವಣೆ ಮಾಡಲು ಈಕೆಳಗಿನಂತೆ ಆದೇಶಿಸಲಾಗಿದೆ.

ಸಂ.ಕಂ.ಪಹಣಿ/ಹ.ಬ.ವಿವಾದ/45/2016-17 ದಿನಾಂಕ:26-09-2016.

## –: ಆದೇಶ :–

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ, ಸಂದರ್ಭ, ವಾಸ್ತವಾಂಶ ಮತ್ತು ಕಾರಣಗಳಿಂದಾಗಿ ಕುರೇಕುಪ್ಪ ಗ್ರಾಮ, ಸ.ನಂ. 258/B3 ವಿಸ್ತೀರ್ಣ 2.05 ಎಕರೆ ಜಮೀನು ಶ್ರೀಮತಿ.ರತ್ನಮ್ಮ ಗಂಡ.ದೊಡ್ಡಬಸಪ್ಪರವರ ಹೆಸರಿನಲ್ಲಿ ಖಾತೆ ಇದ್ದು, ಇವರು ನೊಂದಣೆ ಪ್ರಕಾರ ಶ್ರೀ.ಶೇಖರ ಚಕ್ರವರ್ತಿ ತಂದೆ.ಜಿತೇನ್ ಚಕ್ರವರ್ತಿ ಇವರಿಗೆ 00.50 ಸೆಂಟ್ಸ್ ನೊಂದವಣೆ ಮಾಡಿಸಿರುವುದರಿಂದ ಹಾಗೂ ತಕರಾರುದಾರರು ಯಾವುದೇ ಆಕ್ಷೇಪಣೆ ಇಲ್ಲವೆಂದು ಹೇಳಿಕೆ ನೀಡಿರುವುದರಿಂದ, ನೊಂದಣೆ ಪ್ರಕಾರ ಶ್ರೀ.ಶೇಖರ ಚಕ್ರವರ್ತಿ ತಂದೆ.ಜಿತೇನ್ ಚಕ್ರವರ್ತಿ ಹೆಸರಿಗೆ ವಿಸ್ತೀರ್ಣ 00.50 ಸೆಂಟ್ಸ್, ಉಳಿದ ವಿಸ್ತೀರ್ಣ ಹಾಲಿ ಖಾತೆದಾರರಾದ ಶ್ರೀಮತಿ.ರತ್ನಮ್ಮ ಗಂಡ.ದೊಡ್ಡಬಸಪ್ಪರವರ ಹೆಸರಿಗೆ ವಿಸ್ತೀರ್ಣ 01.55 ಎಕರೆ ಉಳಿಸಲು ಆದೇಶಿಸಿದೆ.

ಈ ಆದೇಶವನ್ನು ತಯಾರಿಸಿ ಗಣಕೀರಣಗೊಳಿಸಿಕೊಂಡು ಪರಿಶೀಲಿಸಿ ಈ ಆದೇಶವನ್ನು ದಿನಾಂಕ: 26-09-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಸಂಡೂರು

ತಹಶೀಲ್ದಾರರು, ಸಂಡೂರು.

ಗೆ,

(1) ವಾದಿಗಳಿಗೆ (2)ಭೂಮಿ ಕೇಂದ್ರ, ಗಣಕೀಕರಣಶಾಖೆಗೆ ಸೂಕ್ತಕ್ರಮಕ್ಕಾಗಿ.

(2) ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರಿಗೆ ಸೂಕ್ತಕ್ರಮಕ್ಕಾಗಿ.